ಎಂ ವಿ ಸಿ ನಂ. 225/2019
ಆರ್ ಡಬ್ಲ್ಯೂಃ 2
ದಿನಾಂಕ 07-03-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀ ಕೆ ಎ ವಕೀಲರಿಂದಃ

ನಾನು ಕೆಎ-03 ಎಸಿ-6268 ರ ಕಾರಿನ ಮಾಲೀಕ ಎಂದರೆ ಸರಿ. ಸದರಿ ಕಾರಿಗೆ ನಾನು 4 ನೇ ಎದುರುದಾರರ ಸಂಸ್ಥೆಯಿಂದ ವಿಮೆ ಮಾಡಿಸಿದ್ದೆ ಎಂದರೆ ಸರಿ. ದಿನಾಂಕ 29/10/2017 ರಂದು ನನಗೆ ಸೇರಿದ ಕಾರಿನಲ್ಲಿ ಈ ಪ್ರಕರಣದ ಅರ್ಜಿದಾರರು, ಸವಿತಾರಮೇಶ್ ಮತ್ತು ಸುರೇಶ್ ಎಂಬುವವರು ಪ್ರಯಾಣ ಮಾಡುತ್ತಿದ್ದರು ಎಂದರೆ ಸರಿ. ಆ ಸಮಯದಲ್ಲಿ 2 ನೇ ಎದುರುದಾರರು ಸದರಿ ಕಾರನ್ನು ಚಾಲನೆ ಮಾಡುತ್ತಿದ್ದರು ಎಂದರೆ ಸರಿ. ಬೆಳ್ತಂಗಡಿ ತಾಲ್ಲೂಕು ಗರಡಾಡಿ ಗ್ರಾಮದ ಸಾರ್ವಜನಿಕ ರಸ್ತೆಯಲ್ಲಿ ಹೋಗುವ ಸಮಯದಲ್ಲಿ 2 ನೇ ಎದುರುದಾರರು ನನ್ನ ಕಾರನ್ನು ಅತೀವೇಗವಾಗಿ ಚಾಲನೆ ಮಾಡಿಕೊಂಡು ಹೋಗಿ ಎದುರುಗಡೆಯಿಂದ ಬರುತ್ತಿದ್ದ ಕೆಎ-09 ಎಂ-6548 ಕಾರಿಗೆ ಡಿಕ್ಕಿ ಪಡಿಸಿ ಅವರ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. 2 ನೇ ಎದುರುದಾರರ ಅತೀವೇಗ ಮತ್ತು ಅಜಾಗರೂಕತೆಯಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತದಿಂದ ಅರ್ಜಿದಾರರಿಗೆ, 2 ನೇ ಎದುರುದಾರರಿಗೆ ಮತ್ತು ಸವಿತಾ ರಮೇಶ್ ಮತ್ತು ಸುರೇಶ್ ರವರಿಗೂ ಸಹ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ ಎಂದರೆ ಸರಿ. ಆ ಸಂದರ್ಭದಲ್ಲಿ ಗಾಯಾಳುಗಳನ್ನು ಮಂಗಳೂರಿನ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಯಿತು ಎಂದರೆ ಸರಿ. ಆ ಸಮಯದಲ್ಲಿ ಅರ್ಜಿದಾರರು ಪೋಲೀಸರ ಮುಂದೆ ಹೇಳಿಕೆ ಕೊಡುವ ಪರಿಸ್ಥಿತಿಯಲ್ಲಿ ಇರಲಿಲ್ಲ ಎಂದರೆ

ಸರಿ. ಆ ಸಮಯದಲ್ಲಿ ಪೋಲಿಸೇರು ತಪ್ಪಾಗಿ ಕೆಎ-09 ಎಂ-6548 ರ ಕಾರಿನ ಚಾಲಕನ ವಿರುದ್ಧ ದೂರನ್ನು ದಾಖಲು ಮಾಡಿರುತ್ತಾರೆ ಎಂದರೆ ಸಾಕ್ಷಿ ಸರಿಯಾಗಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಅಪಘಾತಕ್ಕೆ ಸಂಬಂದಪಟ್ಟಂತೆ ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. 2ನೇ ಎದುರುದಾರರು ನನಗೆ ಸೇರಿದ ಕೆಎ-03 ಎಸಿ-6268 ಕಾರಿನ ಚಾಲಕರಾಗಿರುತ್ತಾರೆ, ಅವರೇನಾದರೂ ಪೋಲೀಸರಿಗೆ ಹೇಳಿಕೆ ನೀಡಿದ್ದಾರಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. 2ನೇ ಎದುರುದಾರರಿಗೆ ಕಾರನ್ನು ಚಾಲನೆ ಮಾಡಲು ಚಾಲನಾ ಪರವಾನಿಗಿ ಇತ್ತು ಎಂದರೆ ಸರಿ. 2ನೇ ಎದುರುದಾರರ ನಿರ್ಲಕ್ಷತನದಿಂದ ಅಪಘಾತವಾಗಿರುವುದರಿಂದ ಅರ್ಜಿದಾರರಿಗೆ ಪರಿಹಾರ ನೀಡಲು ನಾನು ಸಹ ಬಾದ್ಯನಾಗಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.